

# ತೋರಣದಲ್ಲಿ ಒಪ್ಪಓರಣದ ಪಾಠಗಳು

**ತೋರಣ ಚಿನ್ನದ ಎಲೆಗಳದ್ದೇ ಆಗಿರಲಿ, ಮಾವಿನ ಎಲೆಗಳದ್ದೇ ಆಗಿರಲಿ – ಅದನ್ನು ಬಾಗಿಲಿಗೇರಿಸುವಾಗ ಮಕ್ಕಳ ಭಾಗವಹಿಸುವಿಕೆ ಎಷ್ಟರ ಮಟ್ಟಿಗೆ ಇದೆ ಎಂಬುದರಲ್ಲಿ ತೋರಣದ ಸೌಂದರ್ಯ ಅಡಗಿದೆ.**

■ ಸ್ವಯಂಪ್ರಭಾ

‘ಅರೆ, ನಿಮ್ಮ ಬಾಗಿಲಿನ ಈ ತೋರಣ ಎಷ್ಟು ಚೆನ್ನಾಗಿದೆ!’

ಸ್ನೇಹಿತ ರಾಘುವಿನ ಮನೆಯ ಮುಂದೆ ನಿಂತಿದ್ದ ಪುಟ್ಟಣ್ಣ ಕಣ್ಣರಳಿಸಿ ನೋಡುತ್ತಿದ್ದ. ರಾಘು ಚುರುಕು ಹುಡುಗ. ಒಂದು ಕುರ್ಚಿಯನ್ನೇರಿ ಆಗಷ್ಟೇ ತೋರಣದ ಹಗ್ಗವನ್ನು ಬಾಗಿಲಿಗೆ ಬಿಗಿದಿದ್ದ. ಆ ತೋರಣವೇನೂ ಬಹಳ ವಿಶೇಷವಾದುದಾಗಿರಲಿಲ್ಲ. ಮಾವಿನ ಎಲೆಗಳನ್ನು ಒಳಮಡಚಿ ಒತ್ತೊತ್ತಾಗಿ ಎರಡು ಸಾಲುಗಳಲ್ಲಿ ಪೋಣಿಸಿದ್ದ. ಯಾವುದೇ ಸ್ಟೇಪಲ್ ಪಿನ್ ಬಳಸದೇ ರಾಘು ಕಟ್ಟಿದ ತೋರಣ ನೋಡಿ ಪುಟ್ಟಣ್ಣನಿಗೆ ಖುಷಿಯಾಯಿತು.

ಮಾವಿನೆಲೆಗಳನ್ನು ಸ್ಟೇಪಲ್ ಪಿನ್ ಬಳಸಿ ಪೋಣಿಸಬಾರದು ಎಂದು ಅವನೂ ಶಾಲೆಯಲ್ಲಿ ನಡೆದ ಭಾಷಣವೊಂದರಲ್ಲಿ ಕೇಳಿದ್ದ. ಮಾವಿನೆಲೆಯ ತೋರಣವು ಬಾಡಿದ ಬಳಿಕ ಕಸದ ರಾಶಿಯಲ್ಲಿ ಬಿದ್ದಿರುತ್ತವೆ. ಆಗ ಅಲ್ಲಿಗೆ ಬರುವ ಹಸುಗಳು ಈ ತೋರಣವನ್ನು ತಿನ್ನಲು ಬಾಯಿಹಾಕಿದಾಗ ಅದು ಹಸುವಿನ ಬಾಯಿಗೆ ಗಾಯ ಮಾಡಬಹುದು ಎಂದು ಯಾರೋ ಹೇಳಿರುವುದು ಅವನ ಮನಸ್ಸಿನಲ್ಲಿ ಹಾಗೆಯೇ ಅಚ್ಚೊತ್ತಿತ್ತು. ಯಾಕೆಂದರೆ ಅವನ ಮನೆಯಲ್ಲಿ ಸ್ಟೇಪಲ್ ಪಿನ್ ಬಳಸಿಯೇ ತೋರಣ ಕಟ್ಟುತ್ತಿದ್ದರು.

ರಾಘಣ್ಣನ ಪ್ರೇರಣೆ ಮತ್ತು ನೆರವಿನಿಂದ ಪುಟ್ಟಣ್ಣ ಈ ವರ್ಷದ ದೀಪಾವಳಿ ಹಬ್ಬಕ್ಕೆ ತನ್ನ ಮನೆಯ ತೋರಣವನ್ನು ತಾನೇ ಕಟ್ಟಿದ. ಇಬ್ಬರೂ ಸೇರಿ ಎರಡು ದಾರಗಳನ್ನು ಕುರ್ಚಿಗಳಿಗೆ ಕಟ್ಟಿ, ಒತ್ತೊತ್ತಾದ ಜೋಡು ತೋರಣ ಕಟ್ಟಿದರು. ನಂತರ ಬಾಗಿಲಿನ ಇಕ್ಕೆಲಗಳಿಗೆ ಹುಕ್‌ಗಳನ್ನು ಅಂಟಿಸಿ, ತೋರಣವನ್ನು ಬಾಗಿಲಿನ ಮೇಲು ಹೊಸ್ತಿಲಿಗೆ ಒಪ್ಪುವಂತೆ ಏರಿಸಿದರು.

ಆದರೆ ಈ ಬಾರಿ ಮುಂಬಾಗಿಲಿಗೆ ದುಬಾರಿಯ ಚಿನ್ನದೆಲೆಯ ತೋರಣವನ್ನು ಅಮ್ಮ ತಂದಿದ್ದರಿಂದ ಅವನು ಹಿಂಬಾಗಿಲಿಗೆ ತೋರಣ ಕಟ್ಟುವ ಸಾಹಸ ಮಾಡಿದ. ತಾನು ಮಾಡಿದ ತೋರಣ ಹೇಗೆ ತೋರುವುದೋ ಎಂಬ ಉದ್ವೇಗ ಅವನ ಮನದೊಳಗೆ ಏಣಿ ಮೇಲೆ ಏರುವಾಗ ಇಳಿಯುವಾಗ, ಅಮ್ಮನಿಂದ ಬೈಸಿಕೊಂಡಿದ್ದ. ಆದರೆ ಅದು ಯಾವುದೂ ಅವನ ಮನಸ್ಸಿನಲ್ಲಿ ಬೇಸರವನ್ನೇ ಮೂಡಿಸಿರಲಿಲ್ಲ.

ಸೌಂದರ್ಯಪ್ರಜ್ಞೆಯನ್ನು ಇಷ್ಟಪಡುವ ಮನುಷ್ಯರಿಗೆ, ಹೀಗೆ ಕುಶಲವಾದ ಕೆಲಸಗಳನ್ನು ಮಾಡುವಾಗ ಸಿಗುವ ಖುಷಿ ವಿಭಿನ್ನವಾದುದು. ಚಿನ್ನದ ಬಣ್ಣದ ತೋರಣವೂ ಬಾಗಿಲಿಗೆ ಬಹಳ ಚಂದ ಕಾಣುತ್ತದೆ. ಆದರೆ ತಾನೇ ಮಾಡಿದ ಹಸಿರು ತೋರಣವು ಕೇವಲ ಬಾಗಿಲನ್ನಷ್ಟೇ ಅಲ್ಲ, ಮಗು ಮನಸ್ಸನ್ನು ಇನ್ನಷ್ಟು ಚಂದ ಮಾಡುತ್ತದೆ. ಒಂದು ಕೆಲಸದ ಬಗ್ಗೆ ಯೋಚಿಸುವುದು, ಮನದೊಳಗೆ ಒಂದು ಪರಿಕಲ್ಪನೆ ಸಿದ್ಧಮಾಡಿಕೊಂಡ ಬಳಿಕ ಅದನ್ನು ಜಾರಿಮಾಡಲು ಬೇಕಾದ ಸಲಕರಣೆಗಳನ್ನು ಹೊಂದಿಸಿಕೊಳ್ಳುವುದು, ಆ ಕೆಲಸದಲ್ಲಿಯೇ ಶ್ರದ್ಧೆಯಿಂದ ತೊಡಗಿಸಿಕೊಂಡು, ಪರಿಕಲ್ಪನೆಯು ಸಾಕಾರವಾದಾಗ ಮಕ್ಕಳ ಮನಸ್ಸಿಗೆ ದೊರೆಯುವ ಹಿಗ್ಗು ಅಷ್ಟಿಷ್ಟಲ್ಲ. ಹೀಗೆ ಕಾರ್ಯವೊಂದನ್ನು ಸಾಧಿಸಿದಾಗ ಸಿಗುವ ಖುಷಿಯು ದೊಡ್ಡವರಿಗೂ ಇಷ್ಟವಾಗುವುದು. ಮಕ್ಕಳಿಗೆ ಬಾಲ್ಯದಲ್ಲಿ ಸಿಗುವ ಇಂತಹ ಅವಕಾಶಗಳೇ ದೊಡ್ಡವರಾದ ಬಳಿಕ ಅವರಲ್ಲಿ ಪ್ಲಾನ್ ಮಾಡುವ, ಅದಕ್ಕೆ ತಕ್ಕಂತೆ ಕೆಲಸ ಮಾಡುವ ಸ್ವಭಾವ ಸಿದ್ಧಿಸುವಂತೆ ಅವರನ್ನು ರೂಪಿಸುತ್ತದೆ.

ಹಬ್ಬಗಳ ಸಂದರ್ಭದಲ್ಲಿ ತೋರಣ, ರಂಗೋಲಿ, ಪಟಾಕಿಯ ಬೇಕು ಬೇಡಗಳು, ದೀಪ ಹಚ್ಚುವ ನಾಜೂಕು... ಇವುಗಳಲ್ಲೆಲ್ಲ ಮಕ್ಕಳು ತೊಡಗಿಕೊಂಡಿದ್ದರೆ ಅವರ ಸಂಭ್ರಮಕ್ಕೆ ಒಂದು ತೂಕ ಜಾಸ್ತಿಯಾಗಿರುತ್ತದೆ. ಜೊತೆಗೆ ಸೌಂದರ್ಯ ಪ್ರಜ್ಞೆಯ ಬಗ್ಗೆಯೂ ಆಲೋಚಿಸುವುದಕ್ಕೆ ಅವರಿಗೆ ಅವಕಾಶಗಳು ದೊರೆಯುತ್ತವೆ.

ಮನುಷ್ಯನು ತನ್ನ ಸುತ್ತಮುತ್ತ ಏನನ್ನು ನೋಡುತ್ತಾನೋ, ಅದು ಆತನ ವರ್ತನೆ, ನಡವಳಿಕೆ ಮತ್ತು ಭಾವನೆಗಳ ಮೇಲೆ ಬಹಳ ಪರಿಣಾಮ ಬೀರುತ್ತದೆ. ಆದ್ದರಿಂದಲೇ ಇರಬಹುದು, ಮನುಷ್ಯರ ಜೀವನದಲ್ಲಿ ಶಿಸ್ತು ಮತ್ತು ಸೌಂದರ್ಯ, ಅಲಂಕಾರಗಳಿಗೆ ಹೆಚ್ಚು ಪ್ರಾಧಾನ್ಯ ದೊರೆಯುತ್ತದೆ.

ಸುತ್ತಲಿನ ಪರಿಸರವನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವುದಷ್ಟೇ ಅಲ್ಲ, ಸುಂದರವಾಗಿ ಇಟ್ಟುಕೊಳ್ಳುವುದೂ ಒಂದು ಕಲೆ. ಎಲ್ಲರಿಗೂ ಆ ಕಲೆ ಒಲಿಯದೇ ಇದ್ದರೂ, ಆ ನಿಟ್ಟಿನಲ್ಲಿ ಎಲ್ಲರೂ ಪ್ರಯತ್ನ ಮಾಡುತ್ತಲೇ ಇರುತ್ತಾರೆ. ಅಂತಹ ಸೌಂದರ್ಯ ಪ್ರಜ್ಞೆಯನ್ನು ಸಾಕಾರಗೊಳಿಸುವಲ್ಲಿ, ಮನುಷ್ಯರ ಸ್ವಯಂ ಶ್ರಮ ಹೆಚ್ಚಿದಾಗ ಅದರ ಮೌಲ್ಯವೂ ಹೆಚ್ಚಾಗುವುದು, ಗೌರವವೂ ಹೆಚ್ಚಾಗುವುದು.

ತೋರಣ ಚಿನ್ನದ ಎಲೆಗಳದ್ದೇ ಆಗಿರಲಿ, ಮಾವಿನ ಎಲೆಗಳದ್ದೇ ಆಗಿರಲಿ – ಅದನ್ನು ಬಾಗಿಲಿಗೇರಿಸುವಾಗ ಮಕ್ಕಳ ಭಾಗವಹಿಸುವಿಕೆ ಎಷ್ಟರ ಮಟ್ಟಿಗೆ ಇದೆ ಎಂಬುದರಲ್ಲಿ ಆ ಪರಿಸ್ಥಿತಿಯ ಒಟ್ಟು ಸೌಂದರ್ಯ ಅಡಗಿದೆ. ಪುಟ್ಟ ಪುಟ್ಟ ಕೈಗಳಲ್ಲಿ ಯಡವಟ್ಟು ಮಾಡಿಕೊಳ್ಳುತ್ತಾ, ಹರುಕುಮುರುಕು ತೋರಣ ಕಟ್ಟಿದರೂ ಸರಿ, ಅದು ನೋಡಲು ಅಷ್ಟೇನೂ ಚಂದ ಕಾಣದೇ ಇದ್ದರೂ ಸರಿ, ಮಕ್ಕಳ ಭಾಗವಹಿಸುವಿಕೆ ಅಲ್ಲಿದೆ ಎಂಬುದರಲ್ಲಿಯೇ ಖುಷಿ ಅಡಗಿದೆ. ಮುಂದಿನ ವರ್ಷ ಇನ್ನೂ ಚೆನ್ನಾಗಿರುವ ತೋರಣ ಕಟ್ಟಬೇಕು ಎಂದು ಪುಟ್ಟಣ್ಣ ಮಾಡುವ ನಿರ್ಧಾರದಲ್ಲಿಯೇ ಪೋಷಕರ ಯಶಸ್ಸು, ಖುಷಿ ಅಡಗಿರುತ್ತದೆ.

ಪ್ರತಿಕ್ರಿಯಿಸಿ: feedback@sudha.co.in